# ಪ್ರಧಾನ ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ., ರವರ ನ್ಯಾಯಾಲಯ, ಕನಕಪುರ

## ಸಿಸಿ ನಂ.168/2018

| | | | |
|---|---|---|---|
| ಆರೋಪಿ | | ಡಿ.ಡಬ್ಲ್ಯೂ | **1** |
| ಹೆಸರು | | ಶ್ರೀಮತಿ ಯೋಗಂಭಾ ವೈ.ಎಂ | |
| ಗಂಡನ ಹೆಸರು | | ಹರೀಶ್ ಕುಮಾರ್ ಹೆಚ್.ಜೆ | |
| ವಯಸ್ಸು | | **40**ವರ್ಷಗಳು | |
| ಉದ್ಯೋಗ | | ಪಂಚಾಯಿತಿ ಅಭಿವೃದ್ಧಿ ಅಧಿಕಾರಿ | |
| ವಿಳಾಸ | | ಯರೇಹಳ್ಳಿ ಗ್ರಾಮ, | |

ದಿನಾಂಕ.**13.02.2026**ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯವಿಚಾರಣೆ ಃ- ಆರೋಪಿ ಪರ ವಕೀಲರಾದ ಶ್ರೀ ಕೆಪಿಪಿ ರವರಿಂದಃ-**

ನಾನು ರಾಮನಗರ ತಾಲ್ಲೂಕಿನ ಯರೇಹಳ್ಳಿ ಗ್ರಾಮದ ವಾಸಿಯಾಗಿರುತ್ತೇನೆ. ನನಗೆ ದೂರುದಾರರು ಪರಿಚಯವಿರುವುದಿಲ್ಲ. ದೂರುದಾರರ ಪತಿ ಮತ್ತು ಅವರ ಸ್ನೇಹಿತನಾದ ರವಿಕಿರಣ್ ಎನ್ನುವವರು ಸ್ನೇಹಿತರಾಗಿರುತ್ತಾರೆ. ರವಿಕಿರಣ್ ಎನ್ನುವವರು ನನ್ನ ಪತಿಯ ಸಂಬಂಧಿಕನಾಗಿರುತ್ತಾನೆ. ರವಿಕಿರಣ್ ಎನ್ನುವವರು ನನ್ನ ಪತಿಯ ಮರಣಕ್ಕೂ ಮೊದಲು ಯರೇಹಳ್ಳಿ ಗ್ರಾಮದಲ್ಲಿರುವ ನಮ್ಮ ಮನೆಗೆ ಬಂದುಹೋಗಿ ಮಾಡುತ್ತಿದ್ದರು.

ದೂರುದಾರರು ಜೂನ್ **2017**ರಲ್ಲಿ ನಾನು ಅವರಿಂದ ನನ್ನ ಕೌಟುಂಬಿಕ ಹಣಕಾಸಿನ ಅವಶ್ಯಕತೆಗಳಿಗೋಸ್ಕರ ಅವರಿಂದ ಸಾಲ ಪಡೆದುಕೊಂಡಿರುತ್ತೇನೆ ಎಂದು ಹೇಳಿರುವುದು ಸುಳ್ಳಾಗಿರುತ್ತದೆ. ನಾನು ದಿನಾಂಕ.**27.04.2010**ರಲ್ಲಿ ಸರ್ಕಾರಿ ಉದ್ಯೋಗ ಅಂದರೆ ಪಂಚಾಯಿತಿ ಅಭಿವೃದ್ದಿ ಅಧಿಕಾರಿಯಾಗಿ ನೇಮಕಗೊಂಡಿರುತ್ತೇನೆ. ನನ್ನ ಪತಿ ಸಹ ಖಾಸಗಿ ಕಂಪನಿಯಲ್ಲಿ ಕೆಲಸ ಮಾಡುತ್ತಿದ್ದರು. ನಮಗೆ ಯಾವುದೇ ಹಣದ ಅಗತ್ಯತೆ ಇರಲಿಲ್ಲ. ನಮಗೆ ಸಾಕಷ್ಟು ಸಂಪಾದನೆ ಇರುತ್ತದೆ. ನಮ್ಮ ತಂದೆಯವರು ನಮ್ಮ ಕುಟುಂಬದ ಎಲ್ಲಾ ಖರ್ಚು ವೆಚ್ಚಗಳನ್ನು ನೋಡಿಕೊಳ್ಳುತ್ತಿದ್ದರು. ನಾನು ನನ್ನ ನೇಮಕಾತಿಗೆ ಸಂಬಂಧಿಸಿದಂತೆ ಇರುವಂತಹ ದಾಖಲೆಗಳನ್ನು ಈ ಪ್ರಕರಣದಲ್ಲಿ ಸಲ್ಲಿಸುತ್ತಿದ್ದೇನೆ.

ದಿನಾಂಕ.**27.11.2017**ರಲ್ಲಿ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಬ್ಯಾಂಕಿಗೆ ಸಂಬಂಧಿಸಿದ ಚೆಕ್ಕುಗಳನ್ನು ನಗದೀಕರಣಕ್ಕಾಗಿ ಸಲ್ಲಿಸಿದ್ದಾಗಿ ದೂರುದಾರರು ಹೇಳಿರುತ್ತಾರೆ. ಸದರಿ ಈ ಪ್ರಕರಣದಲ್ಲಿರುವಂತಹ ಚೆಕ್ಕುಗಳನ್ನು ಮತ್ತು ಇತರೆ ಚೆಕ್ಕುಗಳನ್ನು ನಾನು ಕಳೆದುಕೊಂಡಿರುತ್ತೇನೆ. ಈ ಸಂಬಂಧ ನಾನು ದಿನಾಂಕ.**28.03.2017**ರಲ್ಲಿ ಬ್ಯಾಂಕಿನಲ್ಲಿ ಸ್ಟಾಪ್ ಪೇಮೆಂಟ್ ಮಾಡಿಸಿರುತ್ತೇನೆ. ದಿನಾಂಕ.**08.08.2018**ರಲ್ಲಿ ರಾಮನಗರದ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಚೆಕ್ಕುಗಳು ಕಳೆದು ಹೋದ ಬಗ್ಗೆ ದೂರನ್ನು ಸಹ ದಾಖಲಿಸಿರುತ್ತೇನೆ. ಸ್ಟಾಪ್ ಪೇಮೆಂಟ್ ಮಾಡಿಸಿದಂತಹ ದಾಖಲೆ ಮತ್ತು ಪೊಲೀಸರು ಕೊಟ್ಟ ಹಿಂಬರಹವನ್ನು ನಾನು ಈ ಕೇಸಿನಲ್ಲಿ ಹಾಜರುಪಡಿಸುತ್ತಿದ್ದೇನೆ.

ನನ್ನ ಮದುವೆಯು ದಿನಾಂಕ.**16.05.2014**ರಂದು ಆಗಿರುತ್ತದೆ. ಮದುವೆಯ ನಂತರವು ಸಹ ನಾನು ನನ್ನ ತಂದೆಯ ಮನೆಯಲ್ಲಿಯೇ ವಾಸವಾಗಿದ್ದೆ. ನನ್ನ ತಂದೆಯ ಮನೆಯು ರಾಮನಗರ ತಾಲ್ಲೂಕಿನ ಯರೇಹಳ್ಳಿ ಗ್ರಾಮದಲ್ಲಿರುತ್ತದೆ. ನನ್ನ ಕೆಲಸದ ಸ್ಥಳ ಮತ್ತು ನನ್ನನ್ನು ಮದುವೆ ಮಾಡಿಕೊಟ್ಟ ಊರು ರಾಮನಗರ ತಾಲ್ಲೂಕಿನ ಹೊಸೂರು ಗ್ರಾಮ ಆಗಿರುತ್ತದೆ. ನಾನು ಮದುವೆಯಾದಂತಹ ಊರಿಗೂ ನನ್ನ ಕೆಲಸದ ಸ್ಥಳಕ್ಕೂ ಸಾರಿಗೆ ಸಂಪರ್ಕ ಸರಿಯಾಗಿ ಇರುವುದಿಲ್ಲ. ಆದ್ದರಿಂದ ನಾನು ನನ್ನ ತಂದೆಯ ಮನೆಯಲ್ಲಿಯೇ ವಾಸವಿದ್ದೆ. ನನ್ನ ತಂದೆಯ ಮನೆಯಲ್ಲಿ ನಾನು ಇದ್ದಾಗ ನನ್ನ ಹೆಸರಿಗೆ ಬಂದತಂಹ ಕೆಲವೊಂದು ಪತ್ರಗಳನ್ನು ನಾನು ಈ ಪ್ರಕರಣದಲ್ಲಿ ಹಾಜರುಪಡಿಸುತ್ತಿದ್ದೇನೆ.

ಈ ಪ್ರಕರಣದಲ್ಲಿರುವಂತಹ ಚೆಕ್ಕುಗಳು ಕಳುವಾದಂತಹ ಚೆಕ್ಕುಗಳಾಗಿದ್ದು, ಅವುಗಳು ದುರುಪಯೋಗಪಡಿಸಿಕೊಂಡಂತಹ ಚೆಕ್ಕುಗಳಾಗಿರುತ್ತವೆ. ನನಗೆ ದೂರುದಾರರಿಂದ ಯಾವುದೇ ನೋಟಿಸ್ ಬಂದಿರುವುದಿಲ್ಲ. ನಾನು ಕೆಲಸ ಮಾಡುತ್ತಿದ್ದ ಸ್ಥಳಕ್ಕೆ ಕೋರ್ಟಿನಿಂದ ಸಮನ್ಸ್ ಬಂದಾಗಲೇ ನನ್ನ ಚೆಕ್ಕುಗಳು ದುರುಪಯೋಗವಾದ ಬಗ್ಗೆ ನನಗೆ ಗೊತ್ತಾಗಿರುತ್ತದೆ. ಈ ವಿಚಾರ ನನಗೆ ಗೊತ್ತಾದ ಮೇಲೆ ನಾನು ಮತ್ತು ನನ್ನ ಪತಿ ದೂರುದಾರರ ಮನೆಗೆ ಹೋಗಿ ಚೆಕ್ಕುಗಳನ್ನು ವಾಪಸ್ಸು ಕೊಡುವಂತೆ ಮತ್ತು ನನ್ನ ವಿರುದ್ದ ಹೂಡಿದ ಪ್ರಕರಣಗಳನ್ನು ಹಿಂಪಡೆಯುವಂತೆ ನಾವು ಕೇಳಿಕೊಂಡಿರುತ್ತೇವೆ. ಆಗ ದೂರುದಾರರು ಸಹ ಕೇಸುಗಳನ್ನು ಹಿಂಪಡೆಯುವುದಾಗಿ ಒಪ್ಪಿ ಕೊಂಡಿದ್ದರು. ಆದರೆ ಅವರು ಹಿಂದಕ್ಕೆ ತೆಗೆದುಕೊಳ್ಳಲಿಲ್ಲ. ಆನಂತರ ನನ್ನ ಪತಿ ದಿನಾಂಕ.**20.07.2020**ರಲ್ಲಿ ರಸ್ತೆ ಅಪಘಾತದಲ್ಲಿ ಮರಣ

ಹೊಂದಿರುತ್ತಾರೆ. ಆದಾದನಂತರ ನಾನು ಮಾನಸಿಕ ಖಿನ್ನತೆಗೆ ಒಳಗಾಗಿದ್ದೆ. ಹಾಗಾಗಿ ನಾನು ದೂರುದಾರರ ವಿರುದ್ದ ಯಾವುದೇ ದೂರು ದಾಖಲಿಸಲಿಲ್ಲ.

ದೂರುದಾರರ ಪತಿ ರಮೇಶ್ ಎನ್ನುವವರು ಮತ್ತು ರವಿಕಿರಣ್ ರವರು ಇಬ್ಬರು ಆತ್ಮೀಯ ಸ್ನೇಹಿತರಾಗಿದ್ದು, ಅವರು ಹಾರೋಹಳ್ಳಿ ಗ್ರಾಮದಲ್ಲಿ ವಾಸವಾಗಿರುತ್ತಾರೆ. ರಮೇಶ್ ರವರು ನಡೆಸುವಂತಹ ಬೇಕರಿಗೂ ರವಿಕಿರಣ್ ರವರ ಮನೆಗೂ ಸುಮಾರು **50**ಮೀಟರ್ ಅಂತರವಿರುತ್ತದೆ. ಹಾಗಾಗಿ ರವಿಕಿರಣ್ ಎನ್ನುವವರು ದುರುಪಯೋಗಪಡಿಸಿಕೊಂಡಂತಹ ಚೆಕ್ಕುಗಳನ್ನು ರಮೇಶ್ ರವರಿಗೆ ನೀಡಿರುತ್ತಾರೆ. ನಂತರ ರಮೇಶ್ ರವರು ಸದರಿ ಚೆಕ್ಕುಗಳನ್ನು ಆತನ ಹೆಂಡತಿಗೆ ಕೊಟ್ಟು ಅವರ ಮೂಲಕ ಈ ಕೇಸನ್ನು ನನ್ನ ವಿರುದ್ದ ದಾಖಲಿಸಿರುತ್ತಾರೆ. ದುರುಪಯೋಗಪಡಿಸಿಕೊಂಡ ಚೆಕ್ಕುಗಳು ಈ ಪ್ರಕರಣದಲ್ಲಿ ಇರುವ ಕಾರಣಕ್ಕೆ ಮತ್ತು ನನ್ನ ಖಾಯಂ ವಿಳಾಸವಾದ ಯರೇಹಳ್ಳಿ ಗ್ರಾಮಕ್ಕೆ ಯಾವುದೇ ನೋಟಿಸ್ ಕಳುಹಿಸದೆ ಇರುವ ಕಾರಣಕ್ಕೆ ನನ್ನನ್ನು ಈ ಪ್ರಕರಣದಿಂದ ದೋಷಮುಕ್ತಗೋಳಿಸಬೇಕಾಗಿ ಪ್ರಾರ್ಥನೆ.

ದಿನಾಂಕ**.21.06.2010**ರ ಅಧಿಕೃತ ಜ್ಞಾಪನದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ**.113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ**-1** ಎಂದು ಗುರುತಿಸಲಾಯಿತು.

ದಿನಾಂಕ**.03.05.2012**ರ ನಿರಾಪೇಕ್ಷಣ ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ**.113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ**-2** ಎಂದು ಗುರುತಿಸಲಾಯಿತು.

ಬ್ಯಾಂಕಿನವರು ನೀಡಿದ ಒಂದು ದಾಖಲೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ**.113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ**-3** ಎಂದು ಗುರುತಿಸಲಾಯಿತು.

ರಾಮನಗರ ಗ್ರಾಮಾಂತರ ಪೊಲೀಸ್ ಠಾಣೆಯವರು ನೀಡಿದ ಒಂದು ಹಿಂಬರಹದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ**.113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ**-4** ಎಂದು ಗುರುತಿಸಲಾಯಿತು.

ಛಾಪಾ ಕಾಗದದ ಮೇಲೆ ನಾನು ಪ್ರಮಾಣೀಕರಿಸಿರುವ ಒಂದು ಪ್ರಮಾಣ ಪತ್ರದ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ**.113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ**-5** ಎಂದು ಗುರುತಿಸಲಾಯಿತು.

ಎನ್.ಎಸ್.ಡಿ.ಎಲ್ ಕಡೆಯಿಂದ ನನ್ನ ವಿಳಾಸಕ್ಕೆ ಬಂದಂತಹ ನಾಲ್ಕು ಪತ್ರಗಳ ದೃಢೀಕೃತ ಪ್ರತಿಗಳನ್ನು ಹಾಜರುಪಡಿಸಿದ್ದೇನೆ. ಇವುಗಳ ಮೂಲ ಪ್ರತಿಗಳನ್ನು ಸಿಸಿ

ನಂ.**113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅವುಗಳನ್ನು ಕ್ರಮವಾಗಿ ನಿಡಿ-**6** ರಿಂದ ನಿಡಿ-**9** ಎಂದು ಗುರುತಿಸಲಾಯಿತು.

ಒಂದು ಅಂಚೆ ಲಕೋಟೆಯ ದೃಢೀಕೃತ ಪ್ರತಿಯನ್ನು ಹಾಜರುಪಡಿಸಿದ್ದೇನೆ. ಇದರ ಮೂಲ ಪ್ರತಿಯನ್ನು ಸಿಸಿ ನಂ.**113/2018**ರಲ್ಲಿ ಹಾಜರುಪಡಿಸಿರುತ್ತೇನೆ. ಅದನ್ನು ನಿಡಿ-**10** ಎಂದು ಗುರುತಿಸಲಾಯಿತು.

**ಪಾಟೀ ಸವಾಲಿಗೆ ಫಿರ್ಯಾದುದಾರರ ಪರ ವಕೀಲರು ಕಾಲಾವಕಾಶ ಕೋರಿದ್ದು, ಆಲಿಸಿ ಕಾಲಾವಕಾಶ ನೀಡಲಾಯಿತು.**

(ಸಾಕ್ಷಿಯ ವಿಚಾರಣೆಯನ್ನು ನಾನು ತೆರೆದ ನ್ಯಾಯಾಲಯದಲ್ಲಿ ಪಡೆದುಕೊಂಡಿರುತ್ತೇನೆ ಎಂದು ದೃಢೀಕರಿಸುತ್ತೇನೆ.)

**ಓ ಹೇ ಕೇ ಸರಿ ಇದೆ,**

**(ರಾಧ.ಎಸ್)**
**ಪ್ರಧಾನ ಸಿವಿಲ್ ನ್ಯಾಯಾಧೀಶರು ಮತ್ತು**
**ಜೆ.ಎಂ.ಎಫ್.ಸಿ, ಕನಕಪುರ.**